**1** ನೇ ಹೆ .ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.

## O.S. No.403/2021. P.W.-1.

ದಿನಾಂಕಃ**20.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್ ಸಿ ಎನ್ ವಕೀಲರಿಂದಃ-

ನಾನು 3 ನೇ ತರಗತಿವರೆಗೂ ಓದಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ಈ ದಾವೆಯನ್ನು ವಾದಿಯು ಏನು ಪರಿಹಾರ ಕೋರಿ ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ವಕೀಲರು ಸಲ್ಲಿಸಿರುವ ತಕರಾರಿಗೆ ಮಾಹಿತಿನ್ನು ನಾನೇ ನೀಡಿರುತ್ತೇನೆ. ದಾವಾ ಸ್ವತ್ತು ಮೂಲತಃ ಸರ್ವೆ ನಂ.153 ರಲ್ಲಿನ 5 ಎಕರೆ 30 ಗುಂಟೆ ಆಸ್ತಿ ಎಂದರೆ ಸರಿ. ಈಗ ಅದು ಸರ್ವೆ ನಂ.205 ಆಗಿದೆ ಎಂದರೆ ಸರಿಯಲ್ಲ. ಸದರಿ 5 ಎಕರೆ 30 ಗುಂಟೆ ಪೈಕಿ 30 ಗುಂಟೆ ಖರಾಬು ಇದೆ ಎಂದರೆ ಸರಿ. ದಾವಾ ಸ್ವತ್ತು ಮೂಲತಃ ಕೃಷ್ಣನಾಯ್ಕ ಬಿನ್ ಭೀಮಾನಾಯ್ಕ ರವರ ಸರ್ಕಾರದಿಂದ ದರಖಾಸ್ತು ಮೂಲಕ ಮಂಜೂರಾದ ಆಸ್ತಿ ಎಂದರೆ ಸರಿ. ಸದರಿ ಕೃಷ್ಣನಾಯ್ಕ ಬಿನ್ ಭೀಮಾನಾಯ್ಕ ರವರಿಗೆ ಸರ್ಕಾರವು ಸಾಗುವಳಿ ಚೀಟಿ ಸಂ.4/1980-81 ರಂತೆ ಸಾಗುವಳಿ ಚೀಟಿ ನೀಡಿದ್ದಾರೆ ಎಂದರೆ ಸರಿ. ಸದರಿ ಸಾಗುವಳಿ ಚೀಟಿ ಕೊಡುವ ಪೂರ್ವದಲ್ಲಿ ಸರ್ಕಾರಿ ಆದೇಶ ಸಂ.KARK137/1974-75 ರಂತೆ ದಿಃ02.08.1974 ರಂದು ಆದೇಶವಾಗಿದೆ ಎಂದರೆ ಸರಿ. ಸದರಿ ಜಮೀನನ್ನು ಮಂಜೂರು ಮಾಡುವಾಗ 15 ವರ್ಷಗಳವರೆಗೂ ಪರಬಾರೆ ಮಾಡಬಾರದು ಎಂದು ಷರತ್ತು ವಿಧಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ಕೃಷ್ಣನಾಯ್ಕ ಬಿನ್ ಭೀಮಾನಾಯ್ಕ ರವರು ವಿವಾಹವಾಗಿರಲಿಲ್ಲ ಹಾಗೂ ಅವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಕೃಷ್ಣನಾಯ್ಕ ಬಿನ್ ಭೀಮಾನಾಯ್ಕನು ವಾದಿಗೆ ಸೋದರಮಾವ ಎಂದರೆ ಸರಿಯಲ್ಲ. ವಾದಿಯ ತಾಯಿಯ ಹೆಸರು ಹೇಮ್ಲಿಬಾಯಿ ಎಂದರೆ ಸರಿಯಲ್ಲ.

ನನಗೆ ಕೃಷ್ಣನಾಯ್ಕ ಬಿನ್ ಭೀಮಾನಾಯ್ಕರವರು ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಹೇಳಿದ್ದು, ಸದರಿ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಕರಾರು ಪತ್ರ ಮಾಡಿಕೊಳ್ಳುವ ಮುನ್ನ ನಾನು ಸರ್ಕಾರದಿಂದ ಅನುಮತಿ ಪಡೆದುಕೊಂಡಿರಲಿಲ್ಲ. ಸದರಿ ಕೃಷ್ಣನಾಯ್ಕ ಬಿನ್ ಭೀಮಾನಾಯ್ಕ ರವರು ಮಾರಾಟ ಮಾಡಲು ಸರ್ಕಾರದಿಂದ ಪೂರ್ವಾನುಮತಿ ಪಡೆದಿದ್ದರೆ ಎಂದರೆ ಸಾಕ್ಷಿಯು ಅವರು ಅನುಮತಿ ಪಡೆದಿರುತ್ತೇನೆ ಎಂದು ನನಗೆ ತಿಳಿಸಿದ್ದರು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಬೇರೆ ಪ್ರಕರಣಕ್ಕೆ ಹಾಜರುಪಡಿಸಿರುತ್ತೇನೆ, ಈ ದಾವೆಯಲ್ಲಿ ಹಾಜರುಪಡಿಸಿಲ್ಲ. ಅನುಮತಿಯನ್ನು ಯಾರು ನೀಡಿರುತ್ತಾರೆ ಎಂದು ತೋರಿಸಲು ನ್ಯಾಯಾಲಯಕೆ ದಾಖಲೆ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿಯು ಕೇಳಿ ನೋಡುತ್ತೇನೆ ಎಂದು ನುಡಿಯುತ್ತಾರೆ.

ಓ ಎಸ್ 143/1997 ರ ಡಿಕ್ರಿ ಆದ ಕಾಲದಲ್ಲಿ ಕೃಷ್ಣನಾಯ್ಕ ಬಿನ್ ಭೀಮಾನಾಯ್ಕ ಜೀವಂತವಿದ್ದರು. ಡಿಕ್ರಿಯಾದ ನಂತರ ಸದರಿ ಡಿಕ್ರಿ ಆಧಾರದ ಮೇಲೆ ಅಮಲ್ಜಾರಿ ಅರ್ಜಿ ಹಾಕಿ ಸದರಿ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಸಿಕೊಳ್ಳಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ಅವರು ಮಾಡಿಕೊಡುತ್ತೇನೆ ಎಂದು ಹೇಳಿದ್ದರಿಂದ ನಾನು ಮಾಡಿಸಿಕೊಂಡಿರಲಿಲ್ಲ.

ಪಕೀರಪ್ಪ ರವರು ಓ ಎಸ್ 141/1997 ರಂತೆ ದಾವೆಯನ್ನು ಕೃಷ್ಣನಾಯ್ಕ ರವರ ವಿರುದ್ಧ ಸಲ್ಲಿಸಿ ಈ ದಾವಾ ಸ್ವತ್ತಿನ ಪೈಕಿ 2 ಎಕರೆ 35 ಗುಂಟೆಗೆ ಸಂಬಂಧಪಟ್ಟಂತೆ ಡಿಕ್ರಿ ಪಡೆದಿರುತ್ತಾರೆ ಎಂದು ಹೇಳಿದ್ದು, ಸದರಿಯವರು ಸಹಃ ಅಮಲ್ಜಾರಿ ಅರ್ಜಿ ಹಾಕಿ ಸದರಿ ಆಸ್ತಿಯನ್ನು ಅವರ ಹೆಸರಿಗೆ ಮಾಡಿಸಿಕೊಂಡಿರುತ್ತಾರಾ ಎಂದರೆ ಸಾಕ್ಷಿಯು ಅವರು ಮಾಡಿಕೊಡುತ್ತೇನೆ ಎಂದು ಹೇಳಿದ್ದರಿಂದ ಅವರು ಸಹ ಮಾಡಿಸಿಕೊಂಡಿರಲಿಲ್ಲ.

ಓ ಎಸ್ 141/1997 ಮತ್ತು ಓ ಎಸ್ 143/1997 ರ ದಾವೆಯಲ್ಲಿ ಕೃಷ್ಣನಾಯ್ಕ ರವರು ಹಾಜರಾಗಿಲ್ಲ ಮತ್ತು ಸಾಕ್ಷ್ಯ ನುಡಿದಿರುವುದಿಲ್ಲ ಎಂದರೆ ಸರಿ. ಕೃಷ್ಣನಾಯ್ಕ ಮತ್ತು ಪಕೀರಪ್ಪ ರವರ ನಡುವೆ ಆಗಿದೆ ಎಂದು ಹೇಳುವ ಕರಾರು ಪತ್ರವನ್ನು ಈ

ದಾವೆಯಲ್ಲಿ ಹಾಜರುಪಡಿಸಿಲ್ಲ, ಸಾಕ್ಷಿ ಮುಂದುವರೆದು ನಾನು ಸದರಿ ಪತ್ರ ಕೇಳಲು ಹೋದಾಗ ಅದು ನಶಿಸಿದೆ ಎಂದು ರಶೀದಿ ನೀಡಿರುತ್ತಾರೆ, ಅದನ್ನು ಹಾಜರುಪಡಿಸಿರುತ್ತೇನೆ. ನಾವು ಡಿಕ್ರಿ ಪಡೆದ 3 ವರ್ಷಗಳವರೆಗೂ ಕೃಷ್ಣನಾಯ್ಕ ಜೀವಂತವಿದ್ದರು ಎಂದರೆ ಸರಿ. ಆ ದಿನ ಯಾರ ಸಮಕ್ಷಮ ವ್ಯಾಪಾರವಾಗಿತ್ತು, ಯಾರು ಸಾಕ್ಷಿದಾರರು ಇದ್ದರು ಎಂದು ಹಳೆಯ ದಾವೆಗಳಲ್ಲಿ ಸಾಕ್ಷಿ ಮಾಡಿಸಿರುತ್ತೀರಾ ಎಂದರೆ ಮಾಡಿಸಿರುತ್ತೇನೆ.

ನಾನು ಡಿಕ್ರಿ ಪಡೆದಿದ್ದ ಸ್ವತ್ತಿನ ಚೆಕ್ಕುಬಂಧಿ ಹೇಳಬಲ್ಲೆ. ನಾನು ಡಿಕ್ರಿ ಪಡೆದ ಸ್ವತ್ತಿನ ಚೆಕ್ಕುಬಂಧಿ ಪೂರ್ವಕ್ಕೆ ರಂಗಪ್ಪ, ಮಲ್ಲಪ್ಪ. ಪಶ್ಚಿಮಕ್ಕೆ ಯಲ್ಲಪ್ಪ, ಮರಿಯಮ್ಮ. ಉತ್ತರಕ್ಕೆ ಕೆಂಚಪ್ಪ, ಹನುಮಂತಪ್ಪ. ದಕ್ಷಿಣಕ್ಕೆ ಕುರುಬಾನಿ ಕಟ್ಟೆ ಇದೆ. ಈ ಚೆಕ್ಕುಬಂಧಿಯ ನಡುವೆ ಇರುವ ಸ್ವತ್ತನ್ನು ಆ ಸಮಯದಲ್ಲಿ ರೂ.25,000/- ಖರೀದಿ ಮಾಡಿರುತ್ತೇವೆ. ಕರಾರು ಪತ್ರವಾದ ದಿನ ರೂ.20,000/- ಹಣವನ್ನು ನೀಡಿರುತ್ತೇನೆ. ನಂತರದಲ್ಲಿ ಕೃಷ್ಣನಾಯ್ಕನು ಆಸ್ಪತ್ರೆಗೆ ಬೇಕು ಎಂದು ಆಗಾಗ್ಗೆ ಬಂದು ಒಂದು ಅಥವಾ ಎರಡು ಸಾವಿರದಂತೆ ಒಟ್ಟು ರೂ.5,000/- ಸಹಃ ಪಡೆದಿರುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

Sd/-
C/c 1 ನೇ ಹೆ. ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.